ದಾವಣಗೆರೆ ನಗರವನ್ನು ಜಿಲ್ಲಾ ಕೇಂದ್ರವನ್ನಾಗಿ ಪರಿವರ್ತಿಸುವ ಬಗ್ಗೆ

(1709): ಶ್ರೀ ವೈ. ಎಂ. ವೀರಣ್ಣ (ದಾವಣಗೆರೆ):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ದಾವಣಗೆರೆ ನಗರವನ್ನು ಜಿಲ್ಲೆಯನ್ನಾಗಿ ಪರಿಗಣಿಸುವುದಾಗಿ ಕಳೆದ ಅಧಿವೇಶನದಲ್ಲಿ 8–12–92ರಂದು ಭರವಸೆ ನೀಡಿದ್ದು ಈ ಭರವಸೆಯನ್ನು ಜಾರಿಗೊಳಿಸಲು ಸರ್ಕಾರವು ಕೈಗೊಂಡಿರುವ ಕ್ರಮವೇನು;

ಆ. ಸದರಿ ವರ್ಷದಲ್ಲಿಯೇ ಜಿಲ್ಲಾ ಕೇಂದ್ರವನ್ನಾಗಿ ಮಾಡುವ ಯೋಚನೆ ಸರ್ಕಾರಕ್ಕಿದೆಯೇ;

ಇ. ಹಾಗಿದ್ದಲ್ಲಿ ಯಾವಾಗ ಆದೇಶ ಹೊರಡಿಸಲಾಗುವುದು ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):–

ಅ. ರಾಜ್ಯದ ಜಿಲ್ಲೆ ಹಾಗೂ ತಾಲ್ಲೂಕು ಪುನರ್ರಚನೆ ಬಗ್ಗೆ ರಚಿಸಲಾಗಿದ್ದ ವಾಸುದೇವರಾವ್ ಹುಂಡೇಕರ್: ಗದ್ದಿಗೌಡರ್ ಸಮಿತಿಗಳು ನೀಡಿರುವ ವರದಿಗಳನ್ನು ಪರಿಶೀಲಿಸಿ ಸೂಕ್ತ ಅಭಿಪ್ರಾಯವನ್ನು ನೀಡುವಂತೆ ಕೋರಿ ಸಚಿವ ಸಂಪುಟವು ಸಚಿವ ಸಂಪುಟ ಉಪಸಮಿತಿಯನ್ನು ರಚಿಸಿತ್ತು. ಈ ಉಪಸಮಿತಿಯು ಕಾರ್ಯದರ್ಶಿಗಳ ಸಮಿತಿಯನ್ನು ರಚಿಸಿ, ಹೊಸದಾಗಿ ಜಿಲ್ಲೆ ಹಾಗೂ ತಾಲ್ಲೂಕುಗಳನ್ನು ರಚಿಸುವಾಗ ಭೌಗೋಳಿಕ ಅಡಳಿತಾತ್ಮಕ, ಆರ್ಥಿಕ ಅಂಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಪರಿಶೀಲಿಸಿ, ಪ್ರಸ್ತಾವನೆ ಸಲ್ಲಿಸಲು ನಿರ್ದೇಶಿಸಿತ್ತು. ಅದರ ಪ್ರಕಾರ ಅಧಿಕಾರಿಗಳ ಸಮಿತಿಯು ಸುದೀರ್ಘ ಪರಿಶೀಲನೆಯ ನಂತರ ಅಂತಿಮ ವರದಿಯನ್ನು ತಯಾರಿಸಿದೆ. ಇದನ್ನು ಸರ್ಕಾರ ಪರಿಶೀಲಿಸಿ ಸೂಕ್ತ ನಿರ್ಧಾರ ಕೈಗೊಳ್ಳುವುದು.

ಆ. ಪ್ರಶ್ನೆ – (ಅ) ಗೆ ನೀಡಿರುವ ಉತ್ತರವೇ ಇದಕ್ಕೂ ಅನ್ವಯಿಸುತ್ತದೆ.

ಇ. ಪ್ರಶ್ನೆ – (ಆ) ಗೆ ನೀಡಿರುವ ಉತ್ತರವೇ ಇದಕ್ಕೂ ಅನ್ವಯಿಸುತ್ತದೆ.

ತಾಲ್ಲೂಕು ಸಮಿತಿ ಅಧಿಕಾರಿಗಳ ಮತ್ತು ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ದರ್ಜೆಯಲ್ಲಿ ತಾರತಮ್ಯ

(1710): ಶ್ರೀ ವೈ.ಎಂ. ವೀರಣ್ಣ (ದಾವಣಗೆರೆ):– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ತಾಲ್ಲೂಕು ಪಂಚಾಯ್ತಿ ಸಮಿತಿಯಲ್ಲಿ ಬರತಕ್ಕಂಥಹ ಅಧಿಕಾರಿಗಳು ಪ್ರಥಮ ದರ್ಜೆ 'ಎ' ಗುಂಪಿನ ಅಧಿಕಾರಿಗಳಾಗಿದ್ದು, ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ಮಾತ್ರ ಪ್ರಥಮ ದರ್ಜೆ 'ಬಿ' ಗುಂಪಿನ ಅಧಿಕಾರಿಗಳಾಗಿರುವ ಬಗ್ಗೆ ಸರ್ಕಾರದ ತಾರತಮ್ಯವೇನು;

ಆ. ಈ ತಾರತಮ್ಯವನ್ನು ಹೋಗಲಾಡಿಸಲು ಸರ್ಕಾರವು ಕೈಗೊಂಡ ಕ್ರಮವೇನು ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು):–

ಅ. ವೃಂದ ಮತ್ತು ನೇಮಕಾತಿ ನಿಯಮಗಳ ಮತ್ತು ರಾಜ್ಯ ಸಿವಿಲ್ ಸೇವೆಗಳ ವರ್ಗೀಕರಣದ